**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 1021/2019**

| | | |
|---|---|---|
| ಸಾಕ್ಷಿಯ ಹೆಸರುಃ | ಪುಟ್ಟಲಕ್ಷ್ಮಮ್ಮ | ಪ್ರಾಸಾಃಃ 5 |
| ಗಂಡನ ಹೆಸರುಃ | ಪುಟ್ಟಸ್ವಾಮಿ | ಚಾಸಾಃಃ 5 |
| ವಯಸ್ಸುಃ | 70 ವರ್ಷ | ಪ್ರಮಾಣೀಕರಿಸಿದ ದಿಃ 25/11/2024 |
| ಉದ್ಯೋಗಃ | ಏನೂ ಇಲ್ಲ | |
| ವಾಸ ಸ್ಥಳಃ | ಸೂಳೇಕೋಟೆ ಗ್ರಾಮ, ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಪ್ರಾಸಾ-1 ರಿಂದ 3 ರವರು ಗೊತ್ತು. ಆರೋಪಿತರು ಗೊತ್ತು. ಸುಮಾರು 7 ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಆರೋಪಿತರು ರಾಮಚಂದ್ರಪ್ಪ ನವರ ಮನೆಯ ಬಳಿ ಜಗಳ ಮಾಡುತ್ತಿದ್ದರು. ಆಗ ನಾನು ಅಲ್ಲೇ ನಿಂತಿದ್ದೆ. ಮೀನಾಕ್ಷಿಯ ಕಾಲು ಕೈಗೆ ಆರೋಪಿತರು ದೊಣ್ಣೆಯಿಂದ ಹೊಡೆದರು. ಯಾವ ಆರೋಪಿತರು ಹೊಡೆದರು ಎಂದು ಗೊತ್ತಿಲ್ಲ. ಜಗಳವಾದ 2 ದಿನಗಳ ನಂತರ ಪೊಲೀಸರು ಸ್ಥಳಕ್ಕೆ ಬಂದರು. ಪೊಲೀಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ11/04/2017 ರಂದು ಚಾಸಾ-1 ಮತ್ತು 2 ರವರು ಅವರ ಮನೆಯ ಮುಂದೆ ಕುಳಿತಿದ್ದಾಗ ಆರೋಪಿತರು ಕೆಎ-12-ಎನ್-8086 ರ ಬೊಲೇರೋ ವಾಹನದಲ್ಲಿ ಬಂದು, 4 ನೇ ಆರೋಪಿತ ಚಾಸಾ-1 ರವರಿಗೆ ದೊಣ್ಣೆಯಿಂದ ಬಲಗಾಲು ಮತ್ತು ಬಲಗೈಗೆ ಹೊಡೆದಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ಚಾಸಾ-2 ರವರಿಗೆ ಕೈಯಿಂದ ಹಿಡಿದು ಎಳೆದಾಡಿ, ಕೆಳಕ್ಕೆ ಕೆಡವಿ ಕಾಲಿನಿಂದ ಹೊಟ್ಟೆಗೆ ಒದ್ದಿರುತ್ತಾರೆ ಎಂದರೆ ಸರಿ. ನಂತರ ಚಾಸಾ-2 ರವರು ಮೇಲೇಳುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ಚಾಸಾ-2 ರವರು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಮಾನಭಂಗ ಪಡಿಸಿರುತ್ತಾರೆ ಎಂದರೆ ಸರಿ. ನಂತರ ಜಗಳ ಬಿಡಿಸಲು ಬಂದ ಚಾಸಾ-3 ರವರ ಬಲಮುಂಗೈ ಮತ್ತು ಕಾಲಿಗೆ 5 ಮತ್ತು 6 ನೇ ಆರೋಪಿತರು ಹೊಡೆದಿರುತ್ತಾರೆ ಎಂದರೆ ಸರಿ. ನಂತರ ಜಗಳ ಬಿಡಿಸಲು ನಾನು ಬಂದೆ ಎಂದರೆ ಸರಿ. ಆರೋಪಿತರು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಾನು ಎಲ್ಲವನ್ನೂ ಕಣ್ಣಾರೆ ನೋಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ.ಆರ್.ವಿ ವಕೀಲರಿಂದಃ**

ಯಾವ ತಾರೀಖು, ತಿಂಗಳು ಮತ್ತು ಇಸವಿಯಂದು ಘಟನೆ ನಡೆಯಿತು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರಿಂದ 3 ನನಗೆ ನೆಂಟರಾಗಬೇಕು. ಪ್ರಾಸಾ-1 ರವರನ್ನು ಶಿರಂಗಾಲ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ. ಯಾವ ಕಾರಣಕ್ಕೆ ಜಗಳವಾಯಿತು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರ ಮನೆ, ಆರೋಪಿತರ ಮನೆ ಮತ್ತು ನಮ್ಮ ಮನೆ ಅಕ್ಕಪಕ್ಕದಲ್ಲಿವೆ. ಚಾಸಾ-1 ಮತ್ತು ಆರೋಪಿತರು ಆಗಾಗ ಜಾಗದ ವಿಷಯಕ್ಕೆ ಜಗಳ ಮಾಡುತ್ತಿರುತ್ತಾರೆ ಎಂದರೆ ಸರಿ. ಅದೇ ವಿಚಾರಕ್ಕೆ ಹಲವಾರು ಬಾರಿ ರಾಜೀ ಮಾಡಿಕೊಂಡಿದ್ದಾರೆ ಎಂದರೆ ಸರಿ. ಮೀನಾಕ್ಷಿಯವರು ನೀಡಿದ ಮಾಹಿತಿ ಮೇರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಯಾವ ತಾರೀಖಿನಂದು ಹೇಳಿಕೆ ನೀಡಿದ್ದೇನೆಂದು ನೆನಪಿಲ್ಲ. ಹೇಳಿಕೆಯಲ್ಲಿ ಎನು ಮಾಹಿತಿ ನೀಡಿದ್ದೇನೆಂದು ಖುದ್ದು ಮಾಹಿತಿ ಇಲ್ಲ.

ಆರೋಪಿತರ ಮತ್ತು ದೂರುದಾರರ ನಡುವೆ ಯಾವುದೇ ಜಗಳವಾಗಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದಾಗ ನಾನು ನನ್ನ ಮನೆಯ ಮುಂದೆ ಇದ್ದೆ, ನಾನು ಬರುವಷ್ಟರಲ್ಲಿ ಜಗಳ ಮುಗಿದಿರಲಿಲ್ಲ. ಯಾರು ಕೊಲೆ ಬೆದರಿಕೆ ಹಾಕಿದರು ಎಂದು ಗೊತ್ತಿಲ್ಲ. ಮೀನಾಕ್ಷಿ ಮತ್ತು ನಾನು ಸಂಬಂಧಿಕರಾದ್ದರಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**